I. ಪ್ರಶ್ನೋತ್ತರಗಳು.

1. ಕಲಾವಿದ ದೇಶದಾದ್ಯಂತ ಪ್ರಸಿದ್ಧಿ ಹೊಂದಲು ಕಾರಣವೇನು? ಅವನ ಕಲೆಯನ್ನು ಜನ ಹೇಗೆ ಮೆಚ್ಚುತ್ತಿದ್ದರು?

ಅಥವಾ

ಕಲಾವಿದನ ಕೀರ್ತಿ ಹೇಗೆ ಹರಡಿತ್ತು? ನೃತ್ಯ ಕಾರ್ಯಕ್ರಮದ ವೈಭವವನ್ನು ವರ್ಣಿಸಿ.

ಅಥವಾ

ಕಲಾವಿದನ ಜನಪ್ರಿಯತೆಗೆ ಕಾರಣವೇನು? ಅವನಲ್ಲಿದ್ದ ಪ್ರತಿಭೆಯನ್ನು ಕಂಡ ಜನ ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು?

ಉ. ಅವನೊಬ್ಬ ಪ್ರತಿಭಾನ್ವಿತ ನೃತ್ಯ ಕಲಾವಿದ. ಅವನ ನೃತ್ಯದ ಕೀರ್ತಿ ದೇಶದಾದ್ಯಂತ ಹರಡಿತ್ತು. ಜನ ಇವನ ನರ್ತನಕ್ಕೆ ಮನಸೋತು ಹೊಗಳುತ್ತಿದ್ದರು. ಪತ್ರಿಕೆಗಳಲ್ಲಿ ದೊಡ್ಡಕ್ಷರಗಳಲ್ಲಿ ಪುಟಪುಟದಗಲ ಅವನ ಕೀರ್ತಿ ಪ್ರಸಾರವಾಗುತ್ತಿದೆ. ರಂಗದ ಮೇಲಿನ ವಿದ್ಯುಚ್ಛಕ್ತಿಯ ಬಣ್ಣಬಣ್ಣದ ಬೆಳಕಿನಲ್ಲಿ, ತೆರೆಯ ಮುಂದು, ಮನಸೆಳೆಯುವ ವಾದ್ಯಗಾಯನದ ನಡುವೆ, ಕಣ್ಣು ಕೋರೈಸುವ ಜರಿ ಬಟ್ಟೆಗಳ ಹೊಳಪಿನಲ್ಲಿ ನರ್ತಕ ರಂಗದ ಮೇಲೆ ಬಂದರೆ ಸಾಕು. ಜನರು ಬೆಚ್ಚಿ ಬೆರಗಾಗಿ, ಉಸಿರು ಬಿಗಿ ಹಿಡಿದು 'ವಾಹ್' ಎಂದು ಉದ್ಗರಿಸುತ್ತಾ, ಸ್ವಪ್ನ ಲೋಕದಲ್ಲಿ ತೇಲುತ್ತಾರೆ. ರಂಗಮಂದಿರದ ಹೊರಗೆ ನಿಂತ ಕಾರುಗಳು, ಮಂದಿರದ ಬಾಗಿಲಿಗೆ ಮಾಡಿದ ಅಲಂಕಾರ, ಬಣ್ಣಬಣ್ಣದ ದೀಪಗಳೆಲ್ಲಾ ಕಿನ್ನರಲೋಕವನ್ನು ಜ್ಞಾಪಕಕ್ಕೆ ತರುತ್ತದೆ. ಜನ ಮೆಚ್ಚಿ ಚಪ್ಪಾಳೆ ತಟ್ಟುವುದು ಕೇಳುತ್ತದೆ.

2. ನೃತ್ಯ ಮುಗಿದ ಮಾರನೆಯ ದಿನ ಕಲಾವಿದ ಎದ್ದಾಗ ಅವನ ಸ್ಥಿತಿ ಹೇಗಿತ್ತು?

ಉ. ನೃತ್ಯ ಮುಗಿದ ಮರುದಿನ ಸೂರ್ಯ ನೆತ್ತಿಗೇರಿದಾಗ ಕಲಾವಿದ ತನ್ನ ಕೆಂಪಾದ ಕಣ್ಣುಗಳನ್ನು ಹೊಸಕುತ್ತಾ ಮೇಲೆದ್ದ. ಸುತ್ತಲೂ ಸಿಗರೇಟು ತುಂಡುಗಳ ಬೂದಿಯ ಧೂಳು. ನಿದ್ರೆ ಸಾಲದೆ ತಲೆ ಸಿಡಿಯುತ್ತಿತ್ತು. ಮೈಯೆಲ್ಲಾ ಭಾರವಾಗಿ ನೋಯುತ್ತಿತ್ತು. ರಾತ್ರಿ ತೊಳೆದಿದ್ದ ಬಣ್ಣ ಮುಖಕ್ಕೆ ಅಂಟಿಕೊಂಡು ಒಣಗಿ ಕೆರೆಯುತ್ತಿತ್ತು. ಕಲಾವಿದ ಎದ್ದು ತಣ್ಣೀರಲ್ಲೇ ಮುಖ ತೊಳೆದ. ತಲೆಯನ್ನು ನೀರಿನಲ್ಲಿ ಅದ್ದಿ ಹತ್ತಿ ಹಗುರಾಗಿಸಿಕೊಂಡು ಕೊಳಕಾಗಿದ್ದ ಸೂಟನ್ನೇ ಧರಿಸಿ, ಬಾಡಿಗೆ ಸೈಕಲ್ಲೇರಿ ಕಾಫಿ ಕುಡಿಯಲು ಹೊರಟ.

3. ಕಲಾವಿದನ ಕಾಫಿ ಮತ್ತು ಸಿಗರೇಟಿನ ಚಿಂತೆ ಹೇಗೆ ಪೂರೈಸಿತು?

ಉ. ತಣ್ಣೀರಲ್ಲಿಯೇ ಮುಖ ತೊಳೆದ ಕಲಾವಿದ, ಕೊಳಕು ಸೂಟನ್ನೇ ಧರಿಸಿ, ಬಾಡಿಗೆ ಸೈಕಲ್ ಏರಿ ಹೊರಟ. ಕಲಾವಿದ ಕಾಫಿ ಹೋಟೆಲಿಗೆ ಹೋಗಿ ಕಾಫಿ ಕುಡಿದು ಮುಗಿಸಿ, ಎದುರಲ್ಲಿ ಕುಳಿತಿದ್ದ ಸೇಟಿಗೆ ಹಣ ಕೊಡಲು ಜೇಬಿಗೆ ಕೈ ಹಾಕಿದಾಗ ಇದ್ದ ಒಂದೇ ಆಣೆಯನ್ನು ಕೊಟ್ಟು ಹೊರಟ. ಆದರೆ ಆ ನಾಣ್ಯ ಸವಕಲು ಎಂದು ಸೇಟು ತೆಗೆದುಕೊಳ್ಳಲಿಲ್ಲ.

ಚಿಲ್ಲರೆ ಇಲ್ಲವೆಂದೂ, ಸಂಜೆ ಕೊಡುವುದಾಗಿಯೂ ಸೇಟುವಿಗೆ ಹೇಳಿ ಹೊರಟ. ಹಿಂದಿನ ದಿನದ ನೃತ್ಯ ಚೆನ್ನಾಗಿತ್ತೆಂದು ಸೇಟು ಹೊಗಳಿದಾಗ ಅವನಿಗೆ 'ಶುಕ್ರಿಯಾ' ತಿಳಿಸಿ ಹೋಟೆಲಿನಿಂದ ಹೊರಟ. ಆಗ ದಾರಿಯಲ್ಲಿ ಸಿಕ್ಕ ಕಲಾವಿದನ ಅಭಿಮಾನಿಯೊಬ್ಬರು ಅವನ ನೃತ್ಯವನ್ನು ಹೊಗಳಿದರು. ಒಂದು ಸಿಗರೇಟನ್ನು ಕೊಟ್ಟರು. ಅವನ ಸಿಗರೇಟಿನ ಚಿಂತೆಯೂ ತೀರಿತು.

4. ಅಂಬಾಜಿ ಯಾರು? ಅವನಿಗೂ ಕಲಾವಿದನಿಗೂ ನಡೆದ ಮಾತುಕತೆಯನ್ನು ವಿವರಿಸಿ.

ಉ. ಕಲಾವಿದ ಬಾಡಿಗೆ ಸೈಕಲೇರಿ ಹೋಗುತ್ತಿದ್ದಾಗ ಆ ದಾರಿಯಲ್ಲಿ ಅಂಬಾಜಿ ಎಂಬ ದರ್ಜಿಯ ಅಂಗಡಿ ಕಾಣಿಸಿತು. "ಓ! ಮಹಾರಾಜ್" ಎಂದು ದರ್ಜಿ ಕೂಗಿದ. "ಬಟ್ಟೆ ಹೊಲಿದು ಕೊಟ್ಟು ಮೂರು ತಿಂಗಳಾಯಿತು. ಬಟ್ಟೆ ಹರೀತಾ ಬಂದ್ರೂ ಕೂಲಿ ಕೊಡಬೇಡವೆ? ಬಡವರು ಬದುಕೋದು ಹೇಗೆ ಸ್ವಾಮಿ?" ಎಂದು ಪ್ರಶ್ನಿಸಿದ. ಅದಕ್ಕೆ ಕಲಾವಿದ, "ಈ ದಿನ ದುಡ್ಡು ಬರುತ್ತೆ. ಸಂಜೆಗೆ ಕಳಿಸಿ ಕೊಡುತ್ತೀನಿ, ಅಂಬಾಜಿ" ಎಂದು ಉತ್ತರಿಸಿದ. "ಮರಿಬೇಡಿ, ಸ್ವಾಮಿ" ಎಂದು ಅಂಬಾಜಿ ಎಚ್ಚರಿಸಿದಾಗ, ಕಲಾವಿದ ಇಲ್ಲವೆನ್ನುತ್ತಾ ಮುಂದಿನ ಮಾತಿಗೆ ಅವಕಾಶಕೊಡದೆ ಹೊರಟುಹೋದ.

5. ಕಲಾವಿದ ಶ್ರೀಮಂತ ಶಿಷ್ಯೆಯ ಮನೆಗೆ ಹೋದಾಗ ಎದುರಿಸಿದ ಅಸಹಾಯಕತೆಯೇನು? ವಿವರಿಸಿ.

ಅಥವಾ

ಕಲಾವಿದನ ಶಿಷ್ಯೆಯ ಮನೆಯಲ್ಲಿನ ವೈಭವದ ವಾತಾವರಣವನ್ನು ವರ್ಣಿಸಿ. ಅಲ್ಲಿ ಕಲಾವಿದನಿಗಾದ ಅನುಭವವೇನು?

ಉ. ಕಲಾವಿದನ ಶ್ರೀಮಂತ ಶಿಷ್ಯೆಯ ದೊಡ್ಡ ಕಾಂಕ್ರೀಟ್ ಮನೆಗೆ ಹೋದಾಗ, ರೇಶ್ಮೆ ಉಡುಪು ಧರಿಸಿದ್ದ ಶಿಷ್ಯೆ ಬಂದು ಕೂತಳು. ಹಿಂದಿನ ದಿನದ ಡ್ಯಾನ್ಸ್ ಚೆನ್ನಾಗಿತ್ತೆಂದು ತನ್ನ ಮೇಸ್ಟರನ್ನು ಹೊಗಳಿದಳು. 'ಪ್ರಳಯ ತಾಂಡವ' ನೃತ್ಯವನ್ನು ತನಗೆ ಕಲಿಸುವಂತೆ ಕೇಳಿದಳು. ಶಿಷ್ಯಳ ತಾಯಿಯ ಆದೇಶದಂತೆ ಬೆಳ್ಳಿ ತಟ್ಟೆಯಲ್ಲಿ ತಿಂಡಿ, ಬೆಳ್ಳಿ ಲೋಟದಲ್ಲಿ ಹೊಗೆಯಾಡುವ ಕಾಫಿ ಬಂತು, ಕಲಾವಿದ ತಿಂದು ಮುಗಿಸಿದನು. ಮೆದುವಾದ ಸೋಫಾ, ಮೃದುವಾದ ರತ್ನಗಂಬಳಿ, ಬೆಳ್ಳಿಯ ಲೋಟ ಮತ್ತು ತಟ್ಟೆ-ಶ್ರೀಮಂತಿಕೆ ತುಂಬಿ ತುಳುಕುತ್ತಿತ್ತು. ಕಲಾವಿದ ಹಿಂದಿನ ತಿಂಗಳ ಸಂಬಳವನ್ನು ನೀಡುವಂತೆ ಕೇಳಿದಾಗ ಆ ಮನೆಯವರು, ಬ್ಯಾಂಕಿಗೆ ರಜೆಯಿರುವ ಕಾರಣ ಎರಡು ದಿನಗಳ ಬಳಿಕ ನೀಡುವುದಾಗಿ ಹೇಳಿದರು. ಕಲಾವಿದನಿಗೆ ಹಣದ ಅಗತ್ಯ ಬಹಳ ಇದ್ದರೂ, ಆ ಶ್ರೀಮಂತರ ಮುಂದೆ ತನ್ನ ಬಡತನವನ್ನು ತೋರಿಸಲು ಬಯಸಲಿಲ್ಲ.

6. ಕಲಾವಿದ ತನ್ನ ಶಿಷ್ಯೆಯ ಮನೆಯಿಂದ ಗುರಿಯಿಲ್ಲದೆ ನಡೆದಾಗ ದಾರಿಯುದ್ದಕ್ಕೂ ಏನೇನು ಕಂಡನು?

ಅಥವಾ

ಕಲಾವಿದ ತನ್ನ ಶಿಷ್ಯೆಯ ಮನೆಯಿಂದ ಹೊರಟು ಸೇಟುವಿನ ಮನೆಯ ದಾರಿಯುದ್ದಕ್ಕೂ ಕಂಡ ದೃಶ್ಯಗಳೇನು?

ಉ ಕಲಾವಿದ ತನ್ನ ಶಿಷ್ಯೆಯ ಮನೆಯಿಂದ ಹೊರಟು ಗುರಿಯಿಲ್ಲದೆ, ಮನ ಬಂದಂತೆ ಕಾಲಾಡಿಸುತ್ತಾ ಸಾಗಿದ. ದಾರಿಯುದ್ದಕ್ಕೂ ಕಂಭದ ಮೇಲೆ, ಗೋಡೆಯ ಮೇಲೆ, ದೀಪದ ಕಂಭದ ಮೇಲೆ, ಕಸದ ತೊಟ್ಟಿಯ ಮೇಲೆ ಎಲ್ಲಾ ಕಡೆಯೂ ಅವನ ಹಿಂದಿನ ದಿನದ ನೃತ್ಯ ಕಾರ್ಯಕ್ರಮದ ಬಣ್ಣ ಬಣ್ಣದ ಜಾಹೀರಾತು ಅಂಟಿಸಿದ್ದರು. ಆ ಜಾಹೀರಾತಿನ ಬೆಲೆ ಸಹ ಈ ಹೊತ್ತು ತನಗಿಲ್ಲ ಎಂದು ಅವನಿಗೆ ಅನಿಸಿತು. ನಿನ್ನೆ ರಂಗಮಂದಿರದಲ್ಲಿ ಚಪ್ಪಾಳೆ ತಟ್ಟಿದ ಜನ ಈಗ ಅವನ ಕಡೆ ತಿರುಗಿಯೂ ನೋಡುವುದಿಲ್ಲ. ನೋಡಿದರೂ ಸಹ ಝೂನಲ್ಲಿರುವ ಪ್ರಾಣಿಯನ್ನು ನೋಡಿದಂತೆ ನೋಡುವವರೆಂದು ಕಲಾವಿದ ಬೇಸರಿಸಿದ.

7. ನೃತ್ಯದ ಕಂಟ್ರಾಕ್ಟು ಹಿಡಿದ ಸೇಟು ಕಾರ್ಯಕ್ರಮದ ದಿನ ಕಲಾವಿದನ ಜೊತೆ ಹೇಗೆ ನಡೆದುಕೊಂಡಿದ್ದ? ನೃತ್ಯದ ಮರುದಿನ ಹೇಗೆ ನಡೆದುಕೊಂಡ?

ಅಥವಾ

ಕಲಾವಿದನಿಗೆ ನೃತ್ಯ ಕಾರ್ಯಕ್ರಮದ ಸಂಭಾವನೆ ಸೇಟುವಿನಿಂದ ಬಂದಿತೆ? ವಿವರಿಸಿ.

ಅಥವಾ

**ಕಲಾವಿದನಿಗೆ ನೃತ್ಯದ ಕಂಟ್ರಾಕ್ಟು ಹಿಡಿದ ಸೇಟುವಿನಿಂದ ಬರಬೇಕಾದ ಹಣದ ಗತಿಯೇನಾಯಿತು? ವಿವರಿಸಿ.**

ಉ. ಕಲಾವಿದನು ತನಗೆ ಬರಬೇಕಾದ ನೃತ್ಯದ ಸಂಭಾವನೆಯನ್ನು ಪಡೆಯಲು ನೃತ್ಯದ ಕಂಟ್ರಾಕ್ಟು ಹಿಡಿದ ಸೇಟುವಿನ ಮನೆಗೆ ಹೋದನು. ಸೇಟುವಿನ ಮನೆ ಬಾಗಿಲು ಮುಚ್ಚಿತ್ತು. ನಾಯಿ ಒಂದೇ ಸಮನೆ ಬೊಗಳುತ್ತಿತ್ತು. ಹಿಂದಿನ ದಿನ ಕಲಾವಿದ ಸೇಟುವಿನ ಮನೆಗೆ ಹೋದಾಗ, ಅದೇ ಸೇಟು ಬಾಗಿಲ ಬಳಿಯೇ ಇವನಿಗಾಗಿ ಕಾಯುತ್ತಿದ್ದನು. ಒಳಗೆ ಸ್ವಾಗತಿಸಿ ಕಾಫಿ ತಿಂಡಿ ತರಿಸಿಕೊಟ್ಟು ಉಪಚರಿಸಿ, ಕಲಾವಿದನ ಪ್ರತಿಭೆಯನ್ನು ಪ್ರಶಂಸಿಸಿ ಹತ್ತು ರೂಪಾಯಿ ಕೊಟ್ಟು ಕಳುಹಿಸಿದ್ದನು. ಈಗ ಎಷ್ಟು ಸಲ 'ಸೇಠ್‌ಜಿ' ಎಂದು ಕರೆದರೂ ಯಾರ ಸುಳಿವೂ ಇರಲಿಲ್ಲ. ಹಿಂದಿನ ದಿನ ನೃತ್ಯದಲ್ಲಿ ಹಣ ಬಾಚಿಕೊಂಡಿದ್ದ ಸೇಟು ಮನೆಯ ಬಾಗಿಲು ತೆಗೆಯಲೇ ಇಲ್ಲ. ಹೆಂಗಸೊಬ್ಬಳು ಒಳಬಾಗಿಲು ತೆರೆದು ಸೇಟು ಮದ್ರಾಸಿಗೆ ಹೋಗಿದ್ದಾರೆಂದೂ, ಮೂರು ದಿನದ ನಂತರ ಬರುತ್ತಾರೆಂದೂ ಹೇಳಿದಳು. ಹಣದ ವಿಷಯ ತನಗೆ ಗೊತ್ತಿಲ್ಲವೆಂದಾಗ, ಕಲಾವಿದ ನಿರಾಸೆಯಿಂದ ಒಣಮೋರೆ ಹಾಕಿಕೊಂಡು ಹಿಂದಿರುಗಿದನು.

8. **ಶೀನು ಯಾರು? ಅವನನ್ನು ಕಲಾವಿದ ಏಕೆ ಹೊಡೆದನು?**

ಉ. ಶೀನು ಕಲಾವಿದನ ಶಿಷ್ಯ. ಅವನಿಗೆ ತನ್ನ ಗುರುವಿನ ಪ್ರತಿಭೆ ಬಗ್ಗೆ ಗೌರವ, ಅಭಿಮಾನವಿತ್ತು. ಕಲಾವಿದನಿಗೆ ನೃತ್ಯದಲ್ಲಿ ನೈಪುಣ್ಯತೆ ಇದ್ದರೂ, ಕಾರ್ಯಕ್ರಮ ನೀಡಲು ಸೇಟ್‌ಜೀಯಂತಹ ಶ್ರೀಮಂತರನ್ನು ಅವಲಂಬಿಸಬೇಕಿತ್ತು. ನೃತ್ಯ ಕಾರ್ಯಕ್ರಮದ ಮರುದಿನ ಕಲಾವಿದನ ಜೇಬಿನಲ್ಲಿ ಬಿಡಿಗಾಸೂ ಇರಲಿಲ್ಲ. ಸಂಭಾವನೆ ನೀಡದೆ ಸೇಟು ಮದ್ರಾಸಿಗೆ ಹೋಗಿರುವ ವಿಷಯ ತಿಳಿದು ಕಲಾವಿದ ಹತಾಶೆಯಲ್ಲಿ ಮುಳುಗಿ ಹೋದ. ನಿರಾಸೆ, ಅವಮಾನ, ಅಸಹಾಯಕತೆ ಎಲ್ಲಾ ಸೇರಿ ಮನಸ್ಸಿನಲ್ಲಿ ನೋವು ತುಂಬಿತ್ತು. ಕೊನೆಗೆ ಮನೆಗೆ ಬಂದಾಗ ಅವನ ಶಿಷ್ಯ ಶೀನು ಕಿರೀಟ, ಭುಜ ಕಿರೀಟ ಮುಂತಾದ ಅಲಂಕಾರಗಳನ್ನು ಎತ್ತಿಡುತ್ತಿದ್ದನು.ಶಿಷ್ಯ ಗುರುವನ್ನು ನೋಡಿ, "ನಿನ್ನೆ ರಾತ್ರಿ ಧನಂಜಯನ ಅಭಿನಯಕ್ಕೆ ಈ ಕಿರೀಟ ಚೆನ್ನಾಗಿತ್ತು" ಎಂದಾಗ, ಕಲಾವಿದ ಶೀನುವಿನ ಕೆನ್ನೆಗೆ ಫಟೀರೆಂದು ಹೊಡೆದ. ಶಿಷ್ಯನ ಕೈಯಿಂದ ಕೆಳಗೆ ಬಿದ್ದ ಕಿರೀಟವನ್ನು ಕಾಲಲ್ಲಿ ಒದೆದ. ಕಲಾವಿದನ ಅಸಹಾಯಕತೆ, ರೋಷ ಎಲ್ಲವೂ ಸೇರಿ ಶಿಷ್ಯನ ಕೆನ್ನೆಗೆ ಹೊಡೆಯುವಂತೆ ಮಾಡಿತು. ತನ್ನ ಪ್ರತಿಭೆಗೆ ಯಾವ ಪುರಸ್ಕಾರವೂ ಸಿಗಲಿಲ್ಲವೆಂದು ಮನಸ್ಸು ದುಃಖಿಸಿತು.

**II. ಸಂದರ್ಭದೊಡನೆ ವಿವರಿಸಿ.**

1. **"ಶೀನೂ, ಶೀನೂ ಬಿಸಿ ನೀರು ಕಾಸಿದ್ದೀಯಾ?"**

ಉ. ಈ ವಾಕ್ಯವನ್ನು ತ.ರಾ.ಸು. ಬರೆದಿರುವ 'ಕಲಾವಿದ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತುಗಳನ್ನು ಕಲಾವಿದನು ತನ್ನ ಶಿಷ್ಯನಾದ ಶೀನುವನ್ನು ಕೇಳಿದನು.

ನೃತ್ಯ ಮುಗಿದ ಮರುದಿನ ಸೂರ್ಯ ನೆತ್ತಿಗೇರಿದಾಗ ಕಲಾವಿದ ತನ್ನ ಕೆಂಪಾದ ಕಣ್ಣುಗಳನ್ನು ಹೊಸಕುತ್ತಾ ಮೇಲೆದ್ದ. ಸುತ್ತಲೂ ಸಿಗರೇಟು ತುಂಡುಗಳ ಬೂದಿಯ ಧೂಳು. ನಿದ್ರೆ ಸಾಲದೆ ತಲೆ ಸಿಡಿಯುತ್ತಿತ್ತು. ಮೈಯೆಲ್ಲಾ ಭಾರವಾಗಿ ನೋಯುತ್ತಿತ್ತು. ರಾತ್ರಿ ತೊಳೆದಿದ್ದ ಬಣ್ಣ ಮುಖಕ್ಕೆ ಅಂಟಿಕೊಂಡು ಒಣಗಿ ಕೆರೆಯುತ್ತಿತ್ತು. ಕಲಾವಿದ ತನ್ನ ಶಿಷ್ಯ ಶೀನೂವನ್ನು ಕರೆದು, ಬಿಸಿನೀರು ಕಾಸಿದ್ದೀಯಾ ಎಂದು ವಿಚಾರಿಸಿದ.

2. **"ನಿನ್ನೆ ರಾತ್ರಿ ನಿಮ್ಮ ನಾಚ್ ತುಂಬಾ ಪಸಂದಾಗಿತ್ತು ಮಹಾರಾಜ್."**

ಉ. ಈ ವಾಕ್ಯವನ್ನು ತ.ರಾ.ಸು. ಬರೆದಿರುವ 'ಕಲಾವಿದ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಕಾಫಿ ಹೋಟೆಲಿನ ಸೇಟು ಕಲಾವಿದನಿಗೆ ಹೇಳಿದನು.

ತಣ್ಣೀರಲ್ಲಿಯೇ ಮುಖ ತೊಳೆದ ಕಲಾವಿದ, ಕೊಳಕು ಸೂಟನ್ನೇ ಧರಿಸಿ, ಬಾಡಿಗೆ ಸೈಕಲ್ ಏರಿ ಹೊರಟ. ಕಲಾವಿದ ಕಾಫಿ ಹೋಟೆಲಿಗೆ ಹೋಗಿ ಕಾಫಿ ಕುಡಿದು ಮುಗಿಸಿ, ಎದುರಲ್ಲಿ ಕುಳಿತಿದ್ದ ಸೇಟಿಗೆ ಹಣ ಕೊಡಲು ಜೇಬಿಗೆ ಕೈ ಹಾಕಿದಾಗ ಇದ್ದ ಒಂದೇ ಆಣೆಯನ್ನು ಕೊಟ್ಟು ಹೊರಟ. ಆದರೆ ಆ ನಾಣ್ಯ ಸವಕಲು ಎಂದು ಸೇಟು

ತೆಗೆದುಕೊಳ್ಳಲಿಲ್ಲ. ಚಿಲ್ಲರೆ ಇಲ್ಲವೆಂದೂ, ಸಂಜೆ ಕೊಡುವುದಾಗಿಯೂ ಸೇಟುವಿಗೆ ಹೇಳಿ ಹೊರಟ. ಹಿಂದಿನ ದಿನದ ನೃತ್ಯ ಚೆನ್ನಾಗಿತ್ತೆಂದು ಸೇಟು ಹೊಗಳಿದಾಗ ಅವನಿಗೆ 'ಶುಕ್ರಿಯಾ' ತಿಳಿಸಿ ಹೋಟೆಲಿನಿಂದ ಹೊರಟ.

3. **"ಬಡವರು ಬದುಕೋದು ಹೇಗೆ ಸ್ವಾಮಿ, ನಿಮ್ಮಂತವರೇ ಹೀಗೆ ಮಾಡಿದರೆ?"**

ಉ. ಈ ವಾಕ್ಯವನ್ನು ತ.ರಾ.ಸು. ಬರೆದಿರುವ 'ಕಲಾವಿದ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತುಗಳನ್ನು ದರ್ಜಿ ಅಂಬಾಜಿಯು ಕಲಾವಿದನಿಗೆ ಹೇಳಿದ.

ಕಲಾವಿದ ಬಾಡಿಗೆ ಸೈಕಲೇರಿ ಹೋಟೆಲಿಗೆ ಹೋಗಿ ಕಾಫಿ ಕುಡಿದು, ದಾರಿಯಲ್ಲಿ ಯಾರೋ ಅಭಿಮಾನಿ ಕೊಟ್ಟ ಸಿಗರೇಟನ್ನು ಸೇದಿ ಮುಂದೆ ಹೋಗುತ್ತಿದ್ದಾಗ ಆ ದಾರಿಯಲ್ಲಿ ಅಂಬಾಜಿ ಎಂಬ ದರ್ಜಿಯ ಅಂಗಡಿ ಕಾಣಿಸಿತು. ಕಲಾವಿದ ಆ ಕಡೆ ನೋಡದೆ ಬೇಗ ಹೋಗಿ ಬಿಡಬೇಕೆಂದು ಇದ್ದಾಗ, "ಓ! ಮಹಾರಾಜ್" ಎಂದು ದರ್ಜಿ ಕೂಗಿದ. ಬೇರೆ ದಾರಿಯಿಲ್ಲದೆ ಕಲಾವಿದ ಒಳಗೆ ಹೋದ. "ಬಟ್ಟೆ ಹೊಲಿದು ಕೊಟ್ಟು ಮೂರು ತಿಂಗಳಾಯಿತು. ಬಟ್ಟೆ ಹರೀತಾ ಬಂದ್ರೂ ಕೂಲಿ ಕೊಡಬೇಡವೆ? ಬಡವರು ಬದುಕೋದು ಹೇಗೆ ಸ್ವಾಮಿ?" ಎಂದು ಪ್ರಶ್ನಿಸಿದ.

4. **"ಕ್ಷಮಿಸಿ, ಹೋದ ತಿಂಗಳ ಸಂಬಳ ಕೊಡುತ್ತೀರಾ?"**

ಉ. ಈ ವಾಕ್ಯವನ್ನು ತ.ರಾ.ಸು. ಬರೆದಿರುವ 'ಕಲಾವಿದ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಕಲಾವಿದನು ತನ್ನ ಶ್ರೀಮಂತ ಶಿಷ್ಯೆಯ ತಾಯಿಯನ್ನು ಕೇಳಿದ.

ಕಲಾವಿದನ ಶ್ರೀಮಂತ ಶಿಷ್ಯೆಯ ದೊಡ್ಡ ಕಾಂಕ್ರೀಟ್ ಮನೆಗೆ ಹೋದಾಗ, ರೇಶ್ಮೆ ಉಡುಪು ಧರಿಸಿದ್ದ ಶಿಷ್ಯೆ ಬಂದು ಕೂತಳು. ಹಿಂದಿನ ದಿನದ ಡ್ಯಾನ್ಸ್ ಚೆನ್ನಾಗಿತ್ತೆಂದು ತನ್ನ ಮೇಸ್ಟರನ್ನು ಹೊಗಳಿದಳು. 'ಪ್ರಳಯ ತಾಂಡವ' ನೃತ್ಯವನ್ನು ತನಗೆ ಕಲಿಸುವಂತೆ ಕೇಳಿದಳು. ಶಿಷ್ಯಳ ತಾಯಿಯ ಆದೇಶದಂತೆ ಬೆಳ್ಳಿ ತಟ್ಟೆಯಲ್ಲಿ ತಿಂಡಿ, ಬೆಳ್ಳಿ ಲೋಟದಲ್ಲಿ ಹೊಗೆಯಾಡುವ ಕಾಫಿ ಬಂತು, ಕಲಾವಿದ ತಿಂದು ಮುಗಿಸಿದನು. ಮೆದುವಾದ ಸೋಫಾ, ಮೃದುವಾದ ರತ್ನಗಂಬಳಿ, ಬೆಳ್ಳಿಯ ಲೋಟ ಮತ್ತು ತಟ್ಟೆ–ಶ್ರೀಮಂತಿಕೆ ತುಂಬಿ ತುಳುಕುತ್ತಿತ್ತು. ಕಲಾವಿದ ಹಿಂದಿನ ತಿಂಗಳ ಸಂಬಳವನ್ನು ನೀಡುವಂತೆ ಕೇಳಿದನು.

5. **"ಸೇಠ್‌ಜಿ ಇದ್ದಾರೆಯೆ?"**

ಉ. ಈ ವಾಕ್ಯವನ್ನು ತ.ರಾ.ಸು. ಬರೆದಿರುವ 'ಕಲಾವಿದ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಕಲಾವಿದ ಸೇಟುವಿನ ಮನೆ ಬಾಗಿಲನ್ನು ತೆಗೆದ ಹೆಂಗಸನ್ನು ಕೇಳಿದ.

ಕಲಾವಿದನು ತನಗೆ ಬರಬೇಕಾದ ನೃತ್ಯದ ಸಂಭಾವನೆಯನ್ನು ಪಡೆಯಲು ನೃತ್ಯದ ಕಂಟ್ರಾಕ್ಟು ಹಿಡಿದ ಸೇಟುವಿನ ಮನೆಗೆ ಹೋದನು. ಸೇಟುವಿನ ಮನೆ ಬಾಗಿಲು ಮುಚ್ಚಿತ್ತು. ನಾಯಿ ಒಂದೇ ಸಮನೆ ಬೊಗಳುತ್ತಿತ್ತು. ಎಷ್ಟು ಸಲ 'ಸೇಠ್‌ಜಿ' ಎಂದು ಕರೆದರೂ ಯಾರ ಸುಳಿವೂ ಇರಲಿಲ್ಲ. ಹಿಂದಿನ ದಿನ ನೃತ್ಯದಲ್ಲಿ ಹಣ ಬಾಚಿಕೊಂಡಿದ್ದ ಸೇಟು ಮನೆಯ ಬಾಗಿಲು ತೆಗೆಯಲೇ ಇಲ್ಲ. ಕಲಾವಿದ ನಾಯಿಗಿಂತ ದೀನ ಸ್ವರದಲ್ಲಿ ಕೂಗಿದಾಗ, ಹೆಂಗಸೊಬ್ಬಳು ಒಳಬಾಗಿಲು ತೆರೆದು ಯಾರೆಂದು ವಿಚಾರಿಸಿದಳು. ಕಲಾವಿದ ಸೇಟ್‌ಜೀ ಇದ್ದಾರೆಯೇ ಎಂದು ಕೇಳಿದ.

**III. ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ಯಾವುದು ಕಿನ್ನರ ಲೋಕದ ಕನಸನ್ನು ಜ್ಞಾಪಕಕ್ಕೆ ತರುತ್ತಿದೆ?**

ಉ. ರಂಗಮಂದಿರದ ಬಾಗಿಲಿಗೆ ಕಟ್ಟಿದ ಬಾಳೆಗಿಡ, ಮಾವಿನ ತೋರಣ, ಬಾವುಟಗಳು ಗಾಳಿಯಲ್ಲಿ ತಲೆಯಾಡಿಸುತ್ತಿದ್ದು, ಬಣ್ಣದ ವಿದ್ಯುತ್ ದೀಪಗಳು ಕಿನ್ನರ ಲೋಕದ ಕನಸನ್ನು ಜ್ಞಾಪಕಕ್ಕೆ ತರುತ್ತಿದೆ.

2. **ನೃತ್ಯದ ಮರುದಿನ ಕಲಾವಿದ ಯಾವಾಗ ಮೇಲೆದ್ದ?**

ಉ. ನೃತ್ಯದ ಮಾರನೆ ದಿನ ಬೆಳಗ್ಗೆ ಸೂರ್ಯ ಮಧ್ಯಾಕಾಶಕ್ಕೆ ಬಂದಾಗ ಕೆಂಪಾದ ಕಣ್ಣುಗಳನ್ನು ಹೊಸಗಿಕೊಳ್ಳುತ್ತಾ ಕಲಾವಿದ ಮೇಲೆದ್ದ.

3. ಕಲಾವಿದನ ಶ್ರೀಮಂತ ಶಿಷ್ಯೆಗೆ ಯಾವ ನೃತ್ಯ ಕಲಿಯುವ ಆಸೆಯಿತ್ತು?

ಉ. ಕಲಾವಿದನ ಶ್ರೀಮಂತ ಶಿಷ್ಯೆಗೆ 'ಪ್ರಳಯ ತಾಂಡವ' ನೃತ್ಯವನ್ನು ಕಲಿಯುವ ಆಸೆಯಿತ್ತು.

4. ನೃತ್ಯದ ಜಾಹೀರಾತನ್ನು ಕಲಾವಿದ ಎಲ್ಲಿ ನೋಡಿದ?

ಉ. ಕಲಾವಿದ ತನ್ನ ಶ್ರೀಮಂತ ಶಿಷ್ಯೆಯ ಮನೆಯಿಂದ ಬರುವ ದಾರಿಯಲ್ಲಿ ಕಂಭದ ಮೇಲೆ, ಗೋಡೆಯ ಮೇಲೆ, ದೀಪದ ಕಂಭದ ಮೇಲೆ, ಕಸದ ತೊಟ್ಟಿಯ ಮೇಲೆ – ಎಲ್ಲಾ ಕಡೆಯೂ ನೃತ್ಯದ ಬಣ್ಣ ಬಣ್ಣದ ಜಾಹೀರಾತನ್ನು ನೋಡಿದ.

5. ನಾಟ್ಯಾಚಾರ್ಯ ಒಣ ಮೋರೆ ಹಾಕಿಕೊಂಡು ಹೊರಟಿದ್ದೇಕೆ?

ಉ. ಕಲಾವಿದ ಸೇಟುವನ್ನು ತನಗೆ ಬರಬೇಕಾದ ಹಣ ಕೇಳಲು ಹೋದಾಗ, ಅವನ ಹೆಂಡತಿ ಅವನು ಊರಲ್ಲಿ ಇಲ್ಲವೆಂದು ದಢಾರನೆ ಬಾಗಿಲು ಮುಚ್ಚಿಕೊಂಡಳು. ಆಗ ನಾಟ್ಯಚಾರ್ಯ ಒಣ ಮೋರೆ ಹಾಕಿಕೊಂಡು ಹೊರಟನು.

## IV. ಪದಗಳ ಅರ್ಥ ತಿಳಿಯಿರಿ.

| | | | | | |
|---|---|---|---|---|---|
| 1. ಕೀರ್ತಿ | = | ಖ್ಯಾತಿ, ಯಶಸ್ಸು | 2. ಸ್ವಪ್ನ ಲೋಕ | = | ಕನಸಿನ ಲೋಕ |
| 3. ಗಾಯನ | = | ಸಂಗೀತ | 4. ನೃತ್ಯ | = | ನರ್ತನ |
| 5. ಗಮಟು | = | ಕೆಟ್ಟ ವಾಸನೆ | 6. ಯಾತನೆ | = | ನೋವು |
| 7. ಮಗ್ನನಾಗು | = | ತಲ್ಲೀನನಾಗು, ಮೈಮರೆ | 8. ದರ್ಜಿ | = | ಬಟ್ಟೆ ಹೊಲಿಯುವವನು |
| 9. ಕಿಚ್ಚು | = | ಬೆಂಕಿ | 10. ಆಜ್ಯಾಹುತಿ | = | ತುಪ್ಪದಿಂದ ಮಾಡುವ ಹೋಮ |
| 11. ನಿರ್ಲಕ್ಷ್ಯ | = | ತಿರಸ್ಕಾರ | 12. ಕಿರೀಟ | = | ಮಕುಟ |
| 13. ಅಭಿನಯ | = | ನಟನೆ | 14. ನಂಜು | = | ವಿಷ |
| 15. ಕಟ್ಟಿಗೆ | = | ಸೌದೆ | 16. ಗಿಲೀಟು | = | ಲೇಪನ (ತಾಮ್ರ ಮುಂತಾದ ಲೋಹಗಳಿಗೆ ಮೆರುಗಿಗಾಗಿ ಬಳಿಯುವ ಮುಲಾಮು) |

+++++